ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬಾಗೇಪಲ್ಲಿ

Ex.01/2017 C.W.1

| | | |
|---|---|---|
| ಸಾಕ್ಷಿದಾರರ ಹೆಸರು | ಃ ಲಕ್ಷ್ಮಿ | |
| ತಂದೆ/ಗಂಡನ ಹೆಸರು | ಃಧೀರೇಂದ್ರ | |
| ವಯಸ್ಸು | ಃ 36 | ಪ್ರಮಾಣೀಕರಿಸಲಾದ ದಿಃ 07/06/18 |
| ವೃತ್ತಿ | ಃ ಎ ಈ ಈ | |
| ವಾಸಸ್ಥಳ | ಃ ಬಾಗೇಪಲ್ಲಿ | |

**ಮುಖ್ಯ ವಿಚಾರಣೆ**

ನನಗೆ ಈ ಪ್ರಕರಣದಲ್ಲಿ ದಿಃ18.07.17 ರಂದು ಆಯುಕ್ತರ ಸಮನ್ಸ್ ಬಂದಿರುತ್ತದೆ. ನಾನು ದಿಃ15.12.2017 ಮತ್ತು ದಿಃ18.01.2018 ರಂದು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿರುತ್ತೇನೆ. ಮೊದಲನೇಯ ಸಲ ಹೋದಾಗ ಪ್ರತಿವಾದಿ ಮಾತ್ರ ಇದ್ದು ಎರಡನೇಯ ಬಾರಿ ಹೋದಾಗ ಎರಡು ಪಕ್ಷಗಾರರ ಸಮಕ್ಷಮದಲ್ಲಿ ಆಯುಕ್ತರ ಕೆಲಸವನ್ನು ಮಾಡಿರುತ್ತೇನೆ. ಸಾಕ್ಷಿಗೆ ಕಮೀಷನರ್ ವರದಿಯನ್ನು ತೋರಿಸಲಾಗಿ ಸಾಕ್ಷಿ ಸದರಿ ಕಮೀಷನರ್ ವರದಿಯನ್ನು ಗುರ್ತಿಸಿದ್ದ ಮೇರೆಗೆ ಅದನ್ನು ನಿ ಸಿ 1 ಎಂದು, ಸಾಕ್ಷಿಯ ಸಹಿಯನ್ನು ನಿ ಸಿ 1 ಎ ಎಂದು ಗುರ್ತಿಸಲಾಯಿತು. ಸ್ಕೆಚ್ ನ ಪ್ರತಿಯನ್ನು ನಿ ಸಿ 2 ಎಂದು, ಸಾಕ್ಷಿಯ ಸಹಿಯನ್ನು ನಿ ಸಿ 2 ಎ ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು ಮಾನ್ಯ ಶ್ರೀ ಎಂ ಕೆ ಎ ವಕೀಲರಿಂದಃ**

ನ್ಯಾಯಾಲಯದಿಂದ ನನಗೆ ಈ ಪ್ರಕರಣದಲ್ಲಿ ಸಮನ್ಸ್ ಬಂದ ನಂತರ ನಾನು ನಮ್ಮ ಕಚೇರಿ ಸಿಬ್ಬಂದಿ ಜೊತೆ ಆಯುಕ್ತರ ಕೆಲಸವನ್ನು ಆಯಕ್ತರ ಸಹಾಯ ಪಡೆದುಕೊಂಡು ಮಾಡಿರುತ್ತೇನೆ. ನಾನು ಆಯುಕ್ತರ ಕೆಲಸ ಮಾಡುವ ಮುಂಚೆ ನ್ಯಾಯಾಲಯದ ಡಿಕ್ರಿ ಪ್ರತಿಯನ್ನು ನೋಡಿಕೊಂಡಿರುತ್ತೇನೆ ಡಿಕ್ರಿ ಪ್ರಕಾರ ಪೂರ್ವಕ್ಕೆ- ಶಹಜಮಾನ್, ಪಶ್ಚಿಮಕ್ಕೆ -ರಸ್ತೆ, ಉತ್ತರಕ್ಕೆ -ರಸ್ತೆ (ಈಗ ಸ್ಟೇಡಿಯಂ) ಮತ್ತು ದಕ್ಷಿಣಕ್ಕೆ -ಸರ್ಕಾರಿ ಕರಾಬು (ಈಗ ರಸ್ತೆ). ಸಾಕ್ಷಿಗೆ ವರದಿಗೆ ಲಗತ್ತಿಸಿರುವ ನಕ್ಷೆಯನ್ನು ತೋರಿಸಲಾಗಿ ಅದರಲ್ಲಿ ಚೆಕ್ಕುಬಂದಿ ನಮೂದಾಗಿದ್ದು ನಕ್ಷೆಯ ಪೂರ್ವದ ಚೆಕ್ಕುಬಂದಿ ನಕ್ಷೆಯಲ್ಲಿ ತೋರಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ನಾವು ಅಕ್ಕ ಪಕ್ಕದಲ್ಲಿ ವಾಸವಿರುವವರ ವಿವರಗಳನ್ನು ಮಾತ್ರ ತೆಗೆದುಕೊಂಡು ನಮೂದು ಮಾಡಿರುತ್ತೇವೆ ಎಂದು ಹೇಳುತ್ತಾರೆ.

ಉದ್ದೇಶ ಪೂರ್ವಕವಾಗಿ ನಾವು ಪೂರ್ವದ ಚೆಕ್ಕುಬಂದಿಯನ್ನು ತಪ್ಪಾಗಿ ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಶಹಜಮಾನ್ ಶೇಖ್ ರವರ ಸ್ವತ್ತು ಎಲ್ಲಿ ಬರುತ್ತದೆ ಎಂದು ಸ್ಥಳದಲ್ಲಿ ಕೇಳಿಕೊಂಡಿರುವುದಿಲ್ಲ. ನಕ್ಷೆಯಲ್ಲಿ ತೋರಿಸಿರುವ ಪೂರ ವಿಸ್ತೀರ್ಣ ಶೈಯದ್ ಜಿಯಾವುದೀನ್‌ಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನಕ್ಷೆಯಲ್ಲಿ ನಮೂದು ಮಾಡಿರುವ ವಿಸ್ತೀರ್ಣ ಮಾತ್ರ ಶೈಯದ್ ಜಿಯಾವುದೀನ್‌ಗೆ ಸೇರಿರುತ್ತದೆ . ರಂಗಪ್ಪನ ಮನೆ ಎಂದು ನಮೂದಾಗಿರುವ 30 X 25 ಶೈಯದ್ ಜಿಯಾವುದೀನ್ ರವರ ಸ್ವತ್ತಿನಲ್ಲಿ ಕಟ್ಟಿಕೊಂಡಿದಾಗಿರುತ್ತದೆ ಎಂದರೆ ಸರಿಯಲ್ಲ. ಶೈಯದ್ ಜಿಯಾವುದೀನ್ ರವರ ಮನೆಯಲ್ಲಿಯೇ ಪ್ರತಿವಾದಿ ರಂಗಪ್ಪ ಒತ್ತುವರಿ ಮಾಡಿಕೊಂಡಿರುತ್ತಾರೆ ಎನ್ನುವ ವಿಚಾರ ನಾನು ಹೇಳಲಾಗುವುದಿಲ್ಲ. ನಾನು ಅಳತೆಯನ್ನು ತಪ್ಪಾಗಿ ನನ್ನ ವರದಿಯಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ಉಕ್ತಲೇಖನವನ್ನು ಮುಕ್ತ ನ್ಯಾಯಾಲಯದಲ್ಲಿ ಗಣಕೀಕರಣಗೊಳಿಸಲಾಯಿತು.)**

ಓ.ಹೇ.ಕೇ. ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಬಾಗೇಪಲ್ಲಿ